# ನದಿ ಬರೆದ ದೃಶ್ಯಕಾವ್ಯ





ಮೂಡುಬಿದಿರೆಗೆ ಸಮೀಪದಲ್ಲಿರುವ 'ಎರುಗುಂಡಿ' ಫಾಲ್ಸ್ ಕಾಡಿನ ನಡುವೆ ನದಿಯೊಂದು ಬರೆದಿರುವ ಅಪೂರ್ವ ದೃಶ್ಯಕಾವ್ಯ.

■ ಡಾ. ನಾಗವೇಣಿ ಎನ್. ಮಂಚಿ
ಚಿತ್ರಗಳು: ಹಿಮಾಲಯ ಎಸ್.

ಮೂಡುಬಿದಿರೆಯಿಂದ ಕಾರ್ಕಳಕ್ಕೆ ಹೋಗುವ ಹೆದ್ದಾರಿಗೆ ಎಡಭಾಗದಲ್ಲೊಂದು ಕೊಡ್ಯಡ್ಕ ರಸ್ತೆ. ಆ ಮಾರ್ಗದಲ್ಲಿ ಸಾಗಿ ಗುಂಡ್ಯಡ್ಕ ತಲುಪಿದರೆ ಕಾಡಿನ ಸಾಕ್ಷಾತ್ಕಾರ. ಜೀವಕಾರುಣ್ಯದ ಅಮೃತಪಾತ್ರದಂತೆ ಕಾಣಿಸುವ ಕಾನನದಲ್ಲಿ ಕೆಲವು ಹೆಜ್ಜೆ ನಡೆದರೆ ಸಾಕು – ಬೆಳ್ನೊರೆಯ ಜಲಪಾತದ ದರ್ಶನವಾಗುತ್ತದೆ.

ನಿತ್ಯ ಹರಿದ್ವರ್ಣ ಕಾಡಿನಿಂದಾವೃತ ಪ್ರದೇಶದ ಕಣಿವೆಯಲ್ಲಿದೆ 'ಎರುಗುಂಡಿ' ಜಲಪಾತ. ಕಣಿವೆಯಲ್ಲಿ ಸಾಗುವ ಸಣ್ಣ ನದಿ ಮಳೆಗಾಲದಲ್ಲಿ ಮೈತುಂಬಿಕೊಂಡು ಬಂಡೆಗಳ ನಡುವೆ ಧುಮ್ಮಿಕ್ಕಿ ಇಂಥ ನಯನ ಮನೋಹರ ದೃಶ್ಯಾವಳಿಯನ್ನು ಸೃಷ್ಟಿಸಿದೆ.

ಮಳೆಗಾಲದ ಆರಂಭದಿಂದ ನವೆಂಬರ್ ತಿಂಗಳವರೆಗೆ ಅಬ್ಬರಿಸುವ ಈ ಜಲಪಾತ ಆಳವಾದ ಗುಂಡಿಯನ್ನು ಹೊಂದಿದೆ. ಕಾವ್ಯದಲ್ಲಿ ಬಣ್ಣನೆಯಾಗುವ

(8ನೇ ಪುಟ ನೋಡಿ)